OS ನಂಬರಃ 49/2018

ಪಿ. ಡಬ್ಲ್ಯೂಃ 2

(ದಿನಾಂಕಃ 07-06-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .)

ಮುಂದುವರೆದ ಪಾಟಿ ಸವಾಲುಃ 1,3 ರಿಂದ 7 ನೇ ಪ್ರತಿವಾದಿಯ ಪರ ಶ್ರೀ ಎಮ್.ಪಿ.ಬಿ.ವಕೀಲರಿಂದ,

ಸರ್ವೇ ನಂ. 180 ರ ಪೂರ್ವದ ಜಮೀನು ಯಾವುದೇ ಆಳದಲ್ಲಿರದೇ ಸರ್ವೇ ನಂ. 180 ರ ಜಮೀನಿಗೆ ಸಮನಾಗಿದೆ. ಸರ್ವೇ ನಂ. 180 ರ ಜಮೀನಿನ ಪೂರ್ವಕ್ಕೆ ಆವಾರ ಗೋಡೆ ನಿರ್ಮಿಸಲು ಹಾಕಿದ ಕಲ್ಲಿಗೆ ಮಣ್ಣು ಹಾಕಿರುತ್ತಾರೆಯೇ?ಎಂದರೆ ಆವಾರ ಗೋಡೆ ಇರುವುದಿಲ್ಲ, ಆದರೆ ಬೆಳೆ ರಕ್ಷಣೆ ಪಾಗಾರ ಇದ್ದು, ಅದರಾಚೆ ಇರುವ ಗಡಿ ರಕ್ಷಣೆಗೆ ಇರುವ ಗಡಿದೆರೆಯನ್ನು ತೆಗೆದು ನಮ್ಮ ಸ್ವಾಧೀನತೆಯನ್ನು ತಪ್ಪಿಸಿದ್ದಾರೆ ಎಂದು ಹೇಳುತ್ತಾರೆ. ಸದರಿ ಪ್ರತಿವಾದಿಯರು ನೀರು ಹರಿಯುವುದನ್ನು ಬಂದ್ ಮಾಡಲು ಅಲ್ಲಿ ತೆಂಗಿನಮರ, ಮಾವಿನಮರ ಹಾಗೂ ಕಲ್ಲಿನಿಂದ ಕಟ್ಟಿದ ಶೆಡ್ ಮತ್ತು ಸಿಮೆಂಟಿನ ಚೌಕಟ್ಟು ನಿರ್ಮಿಸಿರುತ್ತಾರೆ. 2004 ರಲ್ಲಿ ಕಲ್ಯಾಣಿ ಗೊವಿಂದರಾವ್ ಹರಿಕಂತ್ರ ಮತ್ತು ಗೊವಿಂದ ಲೋಕಪ್ಪ ಹರಿಕಂತ್ರ ಇವರು 06/2004 ದಾಖಲಾದ ನಂತರ ಈ ಮೇಲಿನಂತೆ ಗಿಡ ಮರ ನೆಟ್ಟು ಕಲ್ಲಿನ ಶೆಡ್ ನ್ನು ಪ್ರತಿವಾದಿಯರು ನಿರ್ಮಿಸಿರುತ್ತಾರೆ.

ಸರ್ವೇ ನಂ. 180 ಹಾಗೂ 197 ಇವು ಒಂದೇ ಸಮಕಟ್ಟಿನ ಜಮೀನು ಇರುತ್ತವೆ. ಈ ದಾವೆ ಸಲ್ಲಿಸಿದ ನಂತರ ಪ್ರತಿವಾದಿಯರು ಅವರ ಹಾಗೂ ನಮ್ಮ ಜಮೀನಿನ ಸಮತಲವನ್ನು ವ್ಯತ್ಯಾಸ ಮಾಡಿರುತ್ತಾರೆ. ಸದರಿ ಪ್ರತಿವಾದಿಯರು ನನ್ನ ಜಮೀನಿನ ಪೂರ್ವದ ಕಡೆ ನನ್ನ ಜಮೀನಿನ ಸಮತಲಕ್ಕಿಂತ ತಮ್ಮ ಜಮೀನನ್ನು ಎತ್ತರ

ಮಾಡಿರುತ್ತಾರೆ. ನನ್ನ ಜಮೀನಿನ ಪೂರ್ವದ ಕಡೆ 15 ಫೂಟು ಅಗಲದ ರಸ್ತೆ ಎಂದು ಹೇಳುವ ಜಾಗೆ ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಅಸ್ತಿತ್ವದಲ್ಲಿರಲಿಲ್ಲ.

2-ಎಕರೆ 6-ಗುಂಟೆ ಜಮೀನನ್ನು ಕೊಂಕಣ ರೈಲ್ವೆ ಸಲುವಾಗಿ ಸ್ವಾಧೀನಪಡಿಸಿಕೊಂಡಿದ್ದು, ಆನಂತರ 2-ಎಕರೆ 26-ಗುಂಟೆ ಜಮೀನು ನಮಗೆ ಉಳಿದಿದೆ. ಸದರಿ ನಮ್ಮ 2-ಎಕರೆ 26 ಗುಂಟೆ ಜಮೀನಿನಲ್ಲಿ ಎರಡು ಮನೆಗಳಿರುತ್ತವೆ. ಓ. ಎಸ್. ನಂ. 06/2004 ದಾವೆ ಸಲ್ಲಿಸುವ ಪೂರ್ವದಲ್ಲಿಯೇ ಸದರಿ ಮನೆಗಳನ್ನು ನಿರ್ಮಿಸಿದ್ದು, ಅವು ಬಹಳ ವರ್ಷಗಳ ಹಿಂದೆ ನಿರ್ಮಿಸಿದ್ದು, ಅದರ ನಿರ್ಮಾಣದ ಕುರಿತು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ನಮ್ಮ ಜಮೀನಿನ ಪೂರ್ವದ ಕಡೆ ಇರುತ್ತದೆ ಎಂದು ಹೇಳುವ 15-ಫೂಟ್ ರಸ್ತೆ ಬಂದ್ ಮಾಡುವ ಪೂರ್ವದಲ್ಲಿಯೇ ಮನೆಯನ್ನು ನಿರ್ಮಿಸಿರುತ್ತಾರೆ. ಸರ್ವೇ ನಂ. 180 ರಲ್ಲಿ ಮನೆ ಕಟ್ಟುವ ಪರವಾನಿಗೆ ತೆಗೆದುಕೊಂಡೆ ಮನೆಯನ್ನು ನಿರ್ಮಿಸಿರುತ್ತಾರೆ. ಸದರಿ ಮನೆಯ ದಕ್ಷಿಣಕ್ಕೆ ಸಧ್ಯ ಅನುಮತಿ ಮೇರೆಗೆ ಲಾಗುದಾರ ರೈತನ ಜಮೀನಿನಲ್ಲಿ ತಾತ್ಕಾಲಿಕವಾಗಿ ನ್ಯಾಯ ಬಗೆಹರಿಯುವರೆಗೂ ಓಡಾಡಲು ಮೌಖಿಕ ಕರಾರಿನ ವ್ಯವಸ್ಥೆ ಮಾಡಿಕೊಂಡಿರುತ್ತೇವೆ. ನಮ್ಮ ಜಮೀನಿನ ಪಶ್ಚಿಮಕ್ಕೆ ಕೊಂಕಣ ರೈಲ್ವೆರವರ ರಸ್ತೆ ಇದೆ ಎಂದರೆ ಸಾಕ್ಷಿ ಇದೆ, ಆದರೆ ನಮ್ಮ ಜಮೀನಿನಿಂದ 50-ಫೂಟ್ ನಂತರ ರಸ್ತೆ ಇದ್ದು, ಅಲ್ಲಿ ಓಡಾಡಲು ರೈಲ್ವೆ ಇಲಾಖೆಯವರು ಅನುಮತಿ ನೀಡುವುದಿಲ್ಲ ಮತ್ತು ಅಲ್ಲಿ ತಂತಿ ಬೇಲಿ ನಿರ್ಮಿಸಿರುತ್ತಾರೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಸದರಿ ಪಶ್ಚಿಮದ ಕಡೆ ಇರುವ ರಸ್ತೆಯ ಮುಖಾಂತರ ಕಟ್ಟಡ ಕಟ್ಟುವ ಸಾಮಗ್ರಿಗಳನ್ನು ಸರಬರಾಜುವ ಮಾಡಿಕೊಂಡು ಆರ್.ಸಿ.ಸಿ. ಮನೆಯನ್ನು ಕಟ್ಟಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಓ.ಎಸ್. ನಂ. 06/2004 ಎಂದು ದಾವಾ ಸಲ್ಲಿಸಿ ನಮ್ಮ ಜಮೀನಿನ ಪೂರ್ವಕ್ಕೆ 15-ಅಡಿ ರಸ್ತೆ ಇರುತ್ತದೆ ಎಂದು ಮಾಗಣಿ ಮಾಡಿದ್ದೇವೆ ಎಂದರೆ ಸರಿ. ಸದರಿ 15-ಅಡಿ ರಸ್ತೆ ಅಸ್ತಿತ್ವದಲ್ಲಿರುವುದಿಲ್ಲ ಎಂದು ಇದೇ ನ್ಯಾಯಾಲಯ ನನ್ನ ಮಾಗಣಿ ವಜಾ ಮಾಡಿದೆ

ಎಂದರೆ ಸರಿ. ಸದರಿ ಆದೇಶದ ಮೇಲೆ ಸಲ್ಲಿಸಿದ ಅಪೀಲು ಕೂಡ ವಜಾ ಆಗಿದೆ ಎಂದರೆ ಸರಿ, ಆದರೆ ಅದರ ಮೇಲೆ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ 15– ಅಡಿ ರಸ್ತೆ ಬಗ್ಗೆ ಈಗಾಗಲೇ ಆದೇಶವಿದ್ದರೂ ಸಹ ಪುನಃ ಈ ದಾವೆ ಸಲ್ಲಿಸಿರುತ್ತೀರಿ ಎಂದರೆ, ಸದರಿ ಮೊದಲಿನ ದಾವೆ ನಿರಂತರ ಮನಾಯಿಗಾಗಿದ್ದೂ, ಈ ದಾವೆ ಕಬ್ಜೆ ಸಲುವಾಗಿ ಇದೆ ಎಂದು ಹೇಳುತ್ತಾರೆ. ಮೊದಲಿನ ದಾವೆಯಲ್ಲಿ ಘೋಷಣಾತ್ಮಕ ಮಾಗಣಿ ಕೇಳಿದ್ದೀರಿ ಎಂದರೆ ಅದು ನನಗೆ ಅರ್ಥವಾಗುವುದಿಲ್ಲವೆಂದು ಹೇಳುತ್ತಾರೆ.

ನೀವು ಹಾಜರುಪಡಿಸಿದ ನಕಾಶೆಗಳು ಎಲ್ಲವೂ ಸರಿ ಇದೆ ಎಂದು ಹೇಳುತ್ತೀರೋ ಅಥವಾ ತಪ್ಪು ಎಂದು ಹೇಳುತ್ತಿರೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮೂರು ನಮೂನೆಯ ವರದಿ ನೀಡಿದ್ದು, ನ್ಯಾಯಾಲಯದಿಂದ ಹೋದರೆ ಮಾತ್ರ ನಮಗೆ ಸರಿಯಾಗಿ ಗೊತ್ತಾಗುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ಪರವಾಗಿ ಹಾಜರುಪಡಿಸಿದ ನಕಾಶೆಗಳು, ನ್ಯಾಯಾಲಯದಿಂದ ಅಳತೆ ಮಾಡಿದ ನಂತರವೇ ಯಾವುದು ಸರಿ ಎಂದು ಗೊತ್ತಾಗುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಸರ್ವೇ ನಂ.197 ರಲ್ಲಿ ಸಾರ್ವಜನಿಕ ರಸ್ತೆ ಕುರಿತು ನಾನು ಹಾಜರುಪಡಿಸಿದ ಸರ್ವೇ ನಕಾಶೆಯಲ್ಲಿ ತೋರಿಸಿಲ್ಲ. ಅದೇ ರೀತಿ ಸರ್ವೇ ನಂ.180 ರ ಪೂರ್ವಕ್ಕೆ 15–ಅಡಿ ಅಗಲದ ರಸ್ತೆ ಕುರಿತು ಸರ್ವೇ ನಕಾಶೆಯಲ್ಲಿ ತೋರಿಸಿದ್ದಾರಾ ಎಂದರೆ ಸಾಕ್ಷಿ ಅದು ನನ್ನ ಖಾಸಗಿ ರಸ್ತೆ ಇದ್ದು, ಅತಿಕ್ರಮಣದ ಬಗ್ಗೆ ಮಾತ್ರ ತಿಳಿಸಿರುತ್ತಾರೆ ಎಂದು ಹೇಳುತ್ತಾರೆ.

ಪ್ರತಿವಾದಿಯರು ನಮ್ಮ ಜಮೀನಿನ ಪೂರ್ವಕ್ಕೆ ಅತಿಕ್ರಮಣ ಮಾಡಿಲ್ಲ ಹಾಗೂ ನಾನು ಹೇಳುವಂತೆ ಅಲ್ಲಿ 15– ಅಡಿ ಅಗಲದ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಮ್ಮ ಜಮೀನಿನ ಪೂರ್ವಕ್ಕೆ ಪ್ರತಿವಾದಿಯರು 15– ಅಡಿ ಅಗಲದ ರಸ್ತೆಯನ್ನು ಅತಿಕ್ರಮಿಸಿ ಸಿಮೆಂಟಿನ ಚೌಕಟ್ಟು, ಪೇಗಾರ ಮತ್ತು ಕಲ್ಲು ಶೆಡ್ ನ್ನು ಕಟ್ಟಿಸಿದ ನಿಖರವಾದ ದಿನಾಂಕ ನೆನಪಿಲ್ಲ. ಆದರೆ, ಓ.ಎಸ್.ನಂ.06/2004 ದಾವೆ ದಾಖಲಾದ ನಂತರ

ಕಟ್ಟಿರುತ್ತಾರೆ. ಸದರಿ ಓ.ಎಸ್. ನಂ.06/2004 ದಾವೆಯಲ್ಲಿ ಈ ಕುರಿತು ಅರ್ಜಿ ಸಲ್ಲಿಸಿದ್ದೆ.

ನನ್ನ ಜಮೀನಿನ ಪೂರ್ವಕ್ಕಿರುವ ಹಿರಿಯರ ಕಾಲದಿಂದಲೂ ಇರುವ ನೀರು ಹೋಗುವ ಜಾಗೆಯಲ್ಲಿ 5 ಮತ್ತು 6 ನೇ ಪ್ರತಿವಾದಿಯರು ಸಿಮೆಂಟಿನ ಚೌಕಟ್ಟು ಕಟ್ಟಿಕೊಂಡಿರುತ್ತಾರೆ. 2004 ರ ದಾವೆ ಸಲ್ಲಿಸಿದ ನಂತರ ನೀರು ಹೋಗುವ ದಾರಿಯನ್ನು ಕೂಡ ಬಂದ್ ಮಾಡಿರುತ್ತಾರೆ. ಸದರಿ ನೀರು ಗುಡ್ಡದಿಂದ ಬರುತ್ತಿದ್ದು, ಅದನ್ನು ಬಂದ್ ಮಾಡಿದ ನಂತರ ನಮ್ಮ ಜಮೀನಿನಲ್ಲಿ ಯಾವುದೇ ನೀರು ಬರುವುದಿಲ್ಲ. ನನ್ನ ಜಮೀನಿನ ಪೂರ್ವಕ್ಕಿರುವ ಸರ್ವೇ 197 ರ ಜಮೀನಿನಲ್ಲಿ ಅಂದಾಜು 15-16 ಮನೆಗಳಿರುತ್ತವೆ, ಹಾಗೂ ಇನ್ನೂ ಕಟ್ಟಡ ಮಾಡುತ್ತಿದ್ದಾರೆ. 1 ನೇ ಪ್ರತಿವಾದಿಯು ನೀರು ಹಾಗೂ ದಾರಿ ನಡುವೆ ಇರುವ 15-ಫೂಟ್ ಅಗಲದ ಜಾಗೆಯಲ್ಲಿ ಕಲ್ಲಿನ ಶೆಡ್ ನಿರ್ಮಿಸಿಕೊಂಡಿರುತ್ತಾರೆ. ಸದರಿ 1 ನೇ ಪ್ರತಿವಾದಿಯು ನಮ್ಮ ಮೊದಲಿನ ದಾವೆ ಅಫೀಲಿನಲ್ಲಿದ್ದಾಗ ಕಲ್ಲಿನ ಶೆಡ್ ನಿರ್ಮಿಸಿರುತ್ತಾನೆ. 1 ನೇ ಪ್ರತಿವಾದಿಯು ನಮ್ಮ ಜಮೀನಿನಲ್ಲಿ ಎಷ್ಟು ಕ್ಷೇತ್ರ ಅತಿಕ್ರಮಿಸಿದ್ದಾನೆ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಯಾವ ಪ್ರತಿವಾದಿ ಎಷ್ಟು ಜಮೀನನ್ನು ಅತಿಕ್ರಮಿಸಿರುತ್ತಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಪ್ರತಿವಾದಿಯರು ಯಾವ ದಿನಾಂಕದಂದು ಅತಿಕ್ರಮಿಸಿಕೊಂಡಿರುತ್ತಾರೆ ಎಂದು ದಿನಾಂಕ ಹೇಳಲು ಬರುವುದಿಲ್ಲ, ಆದರೆ 2006 ದಾವೆ ದಾಖಲಾದ ನಂತರ ಅತಿಕ್ರಮಿಸಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿಯರು ಯಾವ ರೀತಿಯಿಂದಲೂ ದಾವಾ ಆಸ್ತಿ ಅತಿಕ್ರಮಿಸಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯರು ಬೆಳೆ ರಕ್ಷಣೆ ಪಾಗಾರದ ಹೊರಗೆ ನಮ್ಮ ಜಮೀನು ಇರುವುದಿಲ್ಲ ಹಾಗೂ ಪ್ರತಿವಾದಿಯರು ಯಾವುದೇ ರೀತಿ ಅತಿಕ್ರಮಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 197 ರ ಮೊದಲಿನ ಮಾಲೀಕರು ಯಾರು ಇದ್ದರು ಎಂದರೆ ತಮ್ಮಾಣಿ

ಶೇಷು ಮಡಿವಾಳ ಇದ್ದರು ಎಂದು ಹೇಳುತ್ತಾರೆ. 2004 ರಲ್ಲಿ ನಾವು ಸಲ್ಲಿಸಿದ ದಾವೆ ಪೂರ್ವದಲ್ಲಿಯೇ ಸದರಿ ತಮ್ಮಾಣಿ ಶೇಷು ಮಡಿವಾಳ ಈತನು ತನ್ನ ಅಳಿಯನಾದ ಶ್ರೀಧರ ಮಡಿವಾಳನ ಹೆಸರಲ್ಲಿ ವರ್ಗಾಯಿಸಿದ್ದ. 2004 ರಲ್ಲಿ ದಾವೆ ಸಲ್ಲಿಸುವ ಸಮಯದಲ್ಲಿ ನನ್ನ ಜಮೀನಿನ ಪೂರ್ವಕ್ಕೆ ಶ್ರೀಧರ ಮಡಿವಾಳ ಮಾಲೀಕನಿದ್ದ ಎಂದರೆ ಸರಿ. ಸದರಿ 2004 ರ ನಂತರ ಪ್ರತಿವಾದಿಯರು ಪ್ರತ್ಯೇಕವಾಗಿ ಖರೀದಿಸಿ ಆ ಪ್ರಕಾರ ಕಬ್ಜಾದಾರರಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಖರೀದಿಸಿದ ಜಮೀನಿನ ಜೊತೆಗೆ ನನ್ನ ಜಮೀನನ್ನು ಅತಿಕ್ರಮಿಸಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ಜಮೀನಿನ ಪೂರ್ವಕ ಕಡೆ ಹಾಕಿಕೊಂಡ ಪಾಗಾರದ ನಂತರ ಮಡಿವಾಳರ ಕಾಲದಿಂದಲೂ ಸಹ ನಾವು ಜಮೀನು ಕಬ್ಜಾ ವಹಿವಾಟು ಮಾಡಿಲ್ಲ ಎಂದರೆ ಸರಿಯಲ್ಲ.

ದಾವೆ ಸಲ್ಲಿಸುವ ಸಮಯದಲ್ಲಿ 1 ನೇ ವಾದಿಯು 2 ನೇ ವಾದಿಗೆ ಮೊಕ್ತ್ಯಾರುನಾಮೆ ಬರೆದುಕೊಟ್ಟಿದ್ದ. 1 ನೇ ವಾದಿಯು ಅಂದಾಜು 4-5 ವರ್ಷಗಳ ಹಿಂದೆ ಮೃತಪಟ್ಟಿದ್ದು, ತಾರೀಖು ನೆನಪಿಲ್ಲ. ನಾನು ಹಾಗೂ 1 ನೇ ವಾದಿಯು ದಾವೆ ನಡೆಸಲು 2 ನೇ ವಾದಿಗೆ ದಾವೆ ಸಲ್ಲಿಸುವ ಸಮಯದಲ್ಲಿ ಮೊಕ್ತ್ಯಾರುನಾಮೆ ಬರೆದುಕೊಟ್ಟಿರುತ್ತೇವೆ. ಓ.ಎಸ್.ನಂ.06/2004 ನಡೆಸಲು ಕೂಡ ನಾನು ಮತ್ತು 1 ನೇ ವಾದಿಯು 2 ನೇ ವಾದಿಗೆ ಮೊಕ್ತ್ಯಾರುನಾಮೆ ಬರೆದುಕೊಟ್ಟಿದ್ದೇವು. ಸದರಿ ಓ.ಎಸ್.ನಂ.06/2004 ನ್ನು ಈ ಪ್ರಕರಣದ ಮೂರು ಜನ ವಾದಿಯರು ಸೇರಿ ಮಾಡಿದ್ದೇವು. ಸದರಿ ದಾವೆ ಮೇಲೆ ಮೇಲ್ಮನವಿ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸುವ ಸಮಯದಲ್ಲಿಯೂ ಸಹ 2 ನೇ ವಾದಿಗೆ ಮೊಕ್ತ್ಯಾರುನಾಮೆ ನೀಡಿದ್ದೇವು. ಸದರಿ ಮೊಕ್ತ್ಯಾರುನಾಮೆಯನ್ನು ಇದುವರೆಗೂ ವಾಪಸ್ಸು ಪಡೆದಿಲ್ಲ. 2 ನೇ ವಾದಿ ಪ್ರಕರಣದಲ್ಲಿ ನೀಡಿದ ಸಾಕ್ಷಿ ಎಲ್ಲವೂ ನಮಗೂ ಅನ್ವಯಿಸುತ್ತದೆ ಎಂದರೆ ಆತ ಜ್ಞಾಪಕ ಶಕ್ತಿ ಕಡಿಮೆ ಆದ ಕಾರಣ ತಪ್ಪಾಗಿ ಉತ್ತರಿಸಿರುತ್ತಾರೆ ಎಂದು ಹೇಳುತ್ತಾರೆ. ಉಚ್ಚ ನ್ಯಾಯಾಲಯದಲ್ಲಿನ ಆದೇಶದ ಪ್ರಕಾರ 5 ಮತ್ತು 6 ನೇ ಪ್ರತಿವಾದಿಯರಿಗೆ ರೂ. 10,000/- ನೀಡಬೇಕೆಂದು ಆದ ಆದೇಶದ ಪ್ರಕಾರ ಹಣ ನೀಡಿದ್ದೀರಾ ಎಂದರೆ ಆ

ಕುರಿತು ಉಚ್ಚ ನ್ಯಾಯಾಲಯದಲ್ಲಿಯೇ ಭರಿಸಲಾಗಿದೆ ಎಂದು ಹೇಳುತ್ತಾರೆ. ಇವತ್ತಿನವರೆಗೂ 5 ಮತ್ತು 6 ನೇ ಪ್ರತಿವಾದಿಯರಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ.

ಇದುವರೆಗೂ ನಾನು ಸಾಕ್ಷಿದಾರರ ಪಟ್ಟಿ ನೀಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ನನ್ನ ಸಾಕ್ಷಿ ಮುಗಿದ ನಂತರ ನೀಡುತ್ತೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಸುತ್ತಮುತ್ತಲೂ ಸಾಕಷ್ಟು ಮನೆಗಳಿದ್ದು, ಜನ ಓಡಾಡುತ್ತಾರೆ ಎಂದರೆ ಸಾಕ್ಷಿ ಸರ್ವೇ ನಂ.197 ರ ಜಮೀನಿನಲ್ಲಿ ಓಡಾಡುತ್ತಾರೆ ಎಂದು ಹೇಳುತ್ತಾರೆ. ಸರ್ವೇ ನಂ. 197 ಜಮೀನು ಹೊರತುಪಡಿಸಿ ಉಳಿದ ಸರ್ವೇ ನಂಬರಲ್ಲಿ ಅಲ್ಲಲ್ಲಿ ಮನೆ ಇರುತ್ತದೆ ಎಂದರೆ ಅವು ದೂರದಲ್ಲಿ ಇರುತ್ತವೆ ಎಂದು ಹೇಳುತ್ತಾರೆ. ಸದರಿ ಸುತ್ತಮುತ್ತಲಿನ ಮನೆ ಹಾಗೂ ಜಮೀನಿನ ಮಾಲೀಕರ ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ಒಂದು ಬದಿ ಅರಣ್ಯ ಸಂಬಂಧಿಸಿದ ಜಾಗೆ ಹಾಗೂ ಇನ್ನೊಂದು ಬದಿ ರೈಲ್ವೆ ಇಲಾಖೆಗೆ ಸಂಬಂಧಿಸಿದ ಜಾಗೆ ಇರುತ್ತದೆ ಎಂದು ಹೇಳುತ್ತಾರೆ. ಈ ದಿನ ನ್ಯಾಯಾಲಯಕ್ಕೆ ಸಲ್ಲಿಸಿದ ಸಾಕ್ಷಿದಾರರು ಪ್ರತಿವಾದಿಯರು ಅತಿಕ್ರಮಣ ಮಾಡಿದ್ದಾರಾ ಎನ್ನಲಾದ ಸಮಯದಲ್ಲಿ ಸ್ಥಳದಲ್ಲಿ ಹಾಜರಿರಲಿಲ್ಲ.

ನನ್ನ ಮಾಗಣಿ ಅನುಸಾರ ಕೋರ್ಟ ಶುಲ್ಕ ಸರಿಯಾಗಿ ಭರಿಸಿಲ್ಲ ಎಂದರೆ ಸರಿಯಲ್ಲ. ಕಾರಣ ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ಸಲ್ಲಿಸಿದ ದಾವೆಯಲ್ಲಿಯೇ ದಾರಿ ವಿಷಯದ ಕುರಿತು ಚರ್ಚಿತವಾಗಿದ್ದರಿಂದ ಪುನಃ ಈ ದಾವೆಯಲ್ಲಿ ಪರಿಹಾರ ಪಡೆಯಲು ಅರ್ಹರಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿಯೇ ನನಗೆ ಅನುಭೋಗದ ಹಕ್ಕು ಪಡೆಯಲು ಹಕ್ಕಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.